OS No. 40/2022

PW-1

**(ಇಂದು ದಿಃ 29-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಂದುವರೆದ ಪಾಟೀ ಸವಾಲುಃ- 4ನೇ ಪ್ರತಿವಾದಿ ಪರ ಶ್ರೀ.VJM ವಕೀಲರಿಂದಃ-</u>**

ನನಗೆ ಒಬ್ಬ ಸಹೋದರ ಆತನ ಹೆಸರು ಚಿನ್ನಯ್ಯ ನನ್ನ ಮುತ್ಯಾನ ಹೆಸರು ಹಣಮಯ್ಯ ನನ್ನ ತಂದೆ ಲಚಮಯ್ಯ ಯಾರ ಹೆಸರಿಗೂ ವಿಲ್ ಪತ್ರ ಬರೆದು ಇಟ್ಟಿಲ್ಲ. ಭೀಮಣ್ಣ ತಂದೆ ಅಡಿವೆಪ್ಪ ನನ್ನ ಚಿಕ್ಕಪ್ಪನ ಮಗ. ಸದರಿ ಭೀಮಣ್ಣ ಸರ್ವೆ ನಂಬರ 221 ರಲ್ಲಿನ ಜಮೀನನ್ನು ತನ್ನ ಹೆಸರಿಗೆ ಮುಟೇಷನ ಮಾಡಿಸಿಕೊಂಡಿದ್ದಾರಾ ಎಂದರೆ ಸಾಕ್ಷಿ ಸದರಿ ಜಮೀನನ್ನು ಅಡಿವೆಮ್ಮ ಭೀಮಣ್ಣನಿಗೆ ಕೊಟ್ಟಿದ್ದಾಳೆ ಎಂದು ಹೇಳುತ್ತಾರೆ. ಲಚಮಯ್ಯ ರವರಿಗೆ ಗೌರಮ್ಮ ಒಬ್ಬಳೆ ಮಗಳು ಎಂದರೆ ಸರಿಯಲ. ಸಾಕ್ಷಿ ಮುಂದುವರೆದು ಲಚಮಯ್ಯನಿಗೆ ಒಬ್ಬಳೆ ಮಗಳು ಆದರೆ ಅವಳ ಹೆಸರು ಗೌರಮ್ಮ ಅಲ್ಲ ಚಿನ್ನಮ್ಮ ಎಂದು ಹೇಳುತ್ತಾರೆ. ನನ್ನ ತಂದೆ ಲಚಮಯ್ಯನಿಗೆ ಒಬ್ಬಳೆ ಹೆಂಡತಿ ಎಂದರೆ ಸರಿ. ಆಶಮ್ಮ ಮತ್ತು ಲಚಮಯ್ಯನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಆಶಮ್ಮ ಲಚಮಯ್ಯನ 2ನೇ ಹೆಂಡತಿ. ಆಶಮ್ಮ ಲಚಮಯ್ಯನ 2ನೇ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, 2 ಮತ್ತು 3ನೇ ಪ್ರತಿವಾದಿಯರು ನನ್ನ ಅಣ್ಣನ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಅಣ್ಣ ಚಿನ್ನಯ್ಯ ತೀರಿಹೋಗಿದ್ದಾರೆ. ಆತನ ಹೆಂಡತಿ ಲಕ್ಷ್ಮಿ ಕೂಡ ತೀರಿಹೋಗಿದ್ದಾರೆ. 1ನೇ ಪ್ರತಿವಾದಿ 4ನೆ ಪ್ರತಿವಾದಿಗೆ ಮನೆ ಮಾರಾಟ ಮಾಡಿದ ಸಂಗತಿ ಖರೀದಿ ಪತ್ರ ಮಾಡಿಕೊಡುವಾಗ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ, ಸದರಿ ಮನೆ ಖರೀದಿ ಕೊಟ್ಟ ಬಗ್ಗೆ ನನಗೆ ದಿಃ 09-02-2009 ರಂದು ಗೊತ್ತಾಗಿದೆ ಎಂದರೆ ಸರಿಯಲ್ಲ, ನಾನು ದಾವೆಯಲ್ಲಿ ದಿಃ 09-02-2009 ರಂದು ಜಮೀನು ಖರೀದಿ ಕೊಟ್ಟ ಬಗ್ಗೆ ನನಗೆ ಗೊತ್ತಾಗಿದೆ ಎಂದು ಹೇಳಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ, ನನ್ನ

ದಾವೆ ಕಾಲಪರಿಮಿತಿ ಅವಧಿ ಮೀರಿದೆ ಎಂದರೆ ಸರಿಯಲ್ಲ. ದಾವಾ ಮನೆಗೂ ನನಗೂ ಯಾವುದೇ ಸಂ ಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(6, 7 & 8(a) ಪ್ರತಿವಾದಿಗಳ ಪರ ಶ್ರೀ SRP ವಕೀಲರ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**